8) ತಾಳಿಕೋಟೆ (ಬಿಜಾಪುರ ಜಿಲ್ಲೆ)
9) ಇಳಕಲ್ (ಬಾಗಲಕೋಟೆ ಜಿಲ್ಲೆ)
10) ಹನೂರು (ಚಾಮರಾಜನಗರ ಜಿಲ್ಲೆ)
11) ಗುಳೇದಗುಡ್ಡ (ಬಾಗಲಕೋಟೆ ಜಿಲ್ಲೆ)
12) ಕಿತ್ತೂರು (ಬೆಳಗಾಂ ಜಿಲ್ಲೆ)

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದಲ್ಲಿ ಕಳಪೆ ಆಹಾರ ಸಾಮಾಗ್ರಿ ಪೂರೈಕೆ

642 (294) ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದಲ್ಲಿ ಕಳಪೆ ಗುಣಮಟ್ಟದ ಆಹಾರ ಸಾಮಾಗ್ರಿಗಳು ಪೂರೈಕೆಯಾಗುತ್ತಿರುವ ಬಗ್ಗೆ ಭಕ್ತಾದಿಗಳಿಂದ ದೂರು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಈ ಸಂಬಂಧದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು;

ಆ) ಸರ್ಕಾರ ಆಹಾರ ಸಾಮಾಗ್ರಿಗಳನ್ನು ಖರೀದಿಸುವಾಗ ಇಲ್ಲಿ ಯಾವ ಕ್ರಮ ಆಧಾರದ ಮೇಲೆ ಖರೀದಿಸಲಾಗುತ್ತಿದೆ? (ಪೂರೈಕೆದಾರರ ವಿವರ ನೀಡುವುದು)

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

ಅ) ಇಲ್ಲ.

ಆ) ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಬೇಕಾಗುವ ಅಕ್ಕಿ ಮತ್ತು ದಿನಸಿ ಸಾಮಾಗ್ರಿಗಳನ್ನು ಖರೀದಿಸುವ ಬಗ್ಗೆ ಪ್ರತಿ 6 ತಿಂಗಳಿಗೊಮ್ಮೆ ದಿನ ಪತ್ರಿಕೆಗಳಲ್ಲಿ ಪ್ರಚುರ ಪಡಿಸಿ ಕೆ.ಎಸ್.ಟಿ ನೋಂದಾಯಿತ ಸರಬರಾಜುದಾರರಿಂದ ಅಕ್ಕಿ ಮತ್ತು ದಿನಸಿಗಳಿಗೆ ಪ್ರತ್ಯೇಕ ಕೋಟೇಶನ್‌ಗಳನ್ನು ಪಡೆದು ಅತಿ ಕಡಿಮೆ ದರದ ಕೋಟೇಶನ್‌ಗಳನ್ನು ಅಂಗೀಕರಿಸಲಾಗುವುದು. ತೆಂಗಿನ ಕಾಯಿಗಳನ್ನು ಮೂರು ತಿಂಗಳಿಗೊಮ್ಮೆ ಕೋಟೇಶನ್ ಕರೆದು ಖರೀದಿಸಲಾಗುತ್ತದೆ.

ಅಕ್ಕಿ ಮತ್ತು ದಿನಸಿ ಸಾಮಾಗ್ರಿಗಳನ್ನು ಮೇ ಆಮುಂಚೆ ದಾಯಾನಂದ ನಾಯಕ್, ಕುಂಚಬೆಟ್ಟು, ಉಡುಪಿ ಇವರು ಮತ್ತು ತೆಂಗಿನಕಾಯಿಗಳನ್ನು ಶ್ರೀ ಸದಾಶಿವ ಶೇರ್‌ಗಾರ್ ಗುಲ್ವಾಡಿ, ಇವರು ದಿ:01/01/2003 ರಿಂದ ಸರಬರಾಜು ಮಾಡುತ್ತಿದ್ದಾರೆ.

ರಾಜ್ಯದಲ್ಲಿ ಮುಜರಾಯಿ ದೇವಸ್ಥಾನ ಹಾಗೂ ಅದರ ಜಮೀನು ಮಾರಾಟ

643 (1007) ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಮುಜಾರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಮುಜರಾಯಿ ದೇವಸ್ಥಾನಗಳನ್ನು ಅವುಗಳ ಜಮೀನುಗಳೊಂದಿಗೆ ಖಾಸಗಿಯವರಿಗೆ ಮಾರುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಆ) ಹಾಗಿದ್ದಲ್ಲಿ, ಯಾವ ಯಾವ ದೇವಸ್ಥಾನಗಳನ್ನು ಖಾಸಗಿಯವರಿಗೆ ಮಾರಲು ಸರ್ಕಾರ ನಿರ್ಧರಿಸಿದೆ;

ಇ) ಈ ರೀತಿ ಮುಜರಾಯಿ ದೇವಸ್ಥಾನ ಹಾಗೂ ಅದರ ಜಮೀನುಗಳನ್ನು ಖಾಸಗಿಯವರಿಗೆ ಮಾರಲು ಕಾರಣಗಳೇನು;

ಈ) ಇದರಿಂದ ಬರತಕ್ಕ ಹಣವೆಷ್ಟು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಬೆಳಗಾವಿಯಲ್ಲಿರುವ ಕಿತ್ತೂರುರಾಣಿ ಚೆನ್ನಮ್ಮನ ಸಮಾಧಿಗೆ ಹೋಗುವ ಅಪ್ರೂಚ್ ರಸ್ತೆಯ ಉಳಿದ ಕೆಲಸವನ್ನು ತೆಗೆದುಕೊಳ್ಳುವುದು

644 (745) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ರಸ್ತೆ ನಿಧಿ (ಸಿ.ಆರ್.ಫಂಡ್)ದಲ್ಲಿ ಬ್ರಿಟಿಷರ ಕೂಡ ಹೋರಾಡಿದ ವೀರ ಮಹಿಳೆ ಕಿತ್ತೂರು ಚೆನ್ನಮ್ಮನ ಸಮಾಧಿಗೆ ಹೋಗುವ ಅಪ್ರೋಚ್ ರಸ್ತೆಗೆ ಕೇಂದ್ರ ಸರ್ಕಾರ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಎಂದು ನೀಡಲಾಯಿತು ಹಾಗೂ ಎಷ್ಟು ಮೊತ್ತಕ್ಕೆ ನೀಡಲಾಯಿತು;

ಆ) ಮೊದಲನೆಯ ಹಂತದ ಕೆಲಸ ಮುಗಿದಿದ್ದು ಉಳಿದ ಕೆಲಸಕ್ಕಾಗಿ ಎಷ್ಟು ಮೊತ್ತಕ್ಕೆ ಮಂಜೂರಾತಿ ನೀಡುವ ಸಲುವಾಗಿ ಅಂದಾಜು ವೆಚ್ಚ ಪತ್ರಿಕೆಯನ್ನು ಮುಖ್ಯ ಅಭಿಯಂತರರು ರಾಷ್ಟ್ರೀಯ ಹೆದ್ದಾರಿ ಇವರು ಸರ್ಕಾರಕ್ಕೆ ಕಳುಹಿಸಿರುವರು;

ಇ) ಈ ಕೆಲಸ ಮುಗಿಸಲು ಕೂಡಲೇ ಮಂಜೂರಾತಿ ಕೊಟ್ಟು ಕೆಲಸ ಪ್ರಾರಂಭಿಸಲಾಗುವುದೇ ಹಾಗೂ ಇನ್ನು ಎಷ್ಟು ದಿವಸಗಳೊಳಗಾಗಿ ಈ ಕೆಲಸವನ್ನು ಮಾಡಿ ಮುಗಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಕೇಂದ್ರ ರಸ್ತೆ ನಿಧಿ ಅಡಿಯಲ್ಲಿ ಕೇಂದ್ರ ಸರ್ಕಾರ ಪತ್ರ ದಿನಾಂಕ 2.11.95 ರಲ್ಲಿ ಸದರಿ ಕೆಲಸವು ರೂ. 1.75 ಲಕ್ಷಗಳಿಗೆ ಮಂಜೂರಾಗಿದ್ದು, ಇದರಲ್ಲಿ ಕೇಂದ್ರದ ಪಾಲು ರೂ. 100 ಲಕ್ಷ ಹಾಗೂ ರಾಜ್ಯ ಸರ್ಕಾರದ ಪಾಲು ರೂ. 75 ಲಕ್ಷವೆಂದು ಸೂಚಿಸಲಾಗಿದೆ. 1997-98 ರಲ್ಲಿ ಸದರಿ ಆಯವ್ಯಯದಲ್ಲಿ ಈ ಕೆಲಸಕ್ಕೆ ಕೇವಲ 20 ಲಕ್ಷ ರೂ ಅನುದಾನ ಇದ್ದುದರಿಂದ ರೂ. 66 ಲಕ್ಷಗಳಿಗೆ ಮಾತ್ರ ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ 4.12.97 ರಂದು ನೀಡಲಾಗಿತ್ತು.

ಆ) ಮುಖ್ಯ ಇಂಜಿನಿಯರ್‌ರವರು ರೂ. 96.98 ಲಕ್ಷ ಅಂದಾಜನ್ನು ಸಲ್ಲಿಸಿರುತ್ತಾರೆ. ಈ ಅಂದಾಜಿನಲ್ಲಿ ಕೇವಲ ಚೆನ್ನಮ್ಮ ಸಮಾಧಿ ಲಿಂಕ್ ರಸ್ತೆ 1.48 ಕಿಮೀ ಮಾತ್ರ ಇರದೇ ಇನ್ನು ಎರಡು ರಸ್ತೆಗಳು ಅಂದರೆ, ಬೈಲಹೊಂಗಲ-ಮರುಕುಂಬಿ ಜಿಲ್ಲಾ ಮುಖ್ಯ ರಸ್ತೆ 4.00 ಕಿಮೀ, ಬೈಲವಾಡ-ಹೂರ್ತಿ ಹಳ್ಳಿ ರಸ್ತೆ 1.10 ಕಿಮೀ ಹೀಗೆ ಒಟ್ಟು 6.58 ಕಿಮೀ ಉದ್ದದ ಮೂರು ರಸ್ತೆಗಳ ಅಭಿವೃದ್ಧಿಯ ಪ್ರಸ್ತಾವನೆಯನ್ನು ಹೊಂದಿರುತ್ತವೆ ಇವುಗಳಲ್ಲಿ ಕೇವಲ ಬೈಲಹೊಂಗಲ ಮರುಕುಂಬಿ ರಸ್ತೆ ಮಾತ್ರ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ.

ಇ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಬೈಲಹೊಂಗಲ -ಮರುಕುಂಬಿ ಜಿಲ್ಲಾ ಮುಖ್ಯ ರಸ್ತೆಯ ಅಭಿವೃದ್ಧಿ ಪ್ರಸ್ತಾವನೆಯನ್ನು ಕೇಂದ್ರ ರಸ್ತೆ ನಿಧಿ ಅಡಿಯಲ್ಲಿ ತೆಗೆದುಕೊಳ್ಳಲು ಭಾರತ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.